## ಮಾದರಿ ಕೃಷಿ ಒಪ್ಪಂದ – ಬಾಳೆಹಣ್ಣು

---

ಈ ಕೃಷಿ ಒಪ್ಪಂದವನ್ನು ('ಒಪ್ಪಂದ') ______________________________ ನಲ್ಲಿ ಕಚೇರಿಯನ್ನು ಹೊಂದಿರುವ _________________________________ (ಇನ್ನು ಮುಂದೆ ಇದನ್ನು 'ಕಂಪನಿ' ಎನ್ನಲಾಗುವುದು)

ಮತ್ತು

ರೈತನ ಹೆಸರು ___________________________

ವಿಳಾಸ:

(ಇನ್ನು ಮುಂದೆ ಇದನ್ನು 'ರೈತ' ಎನ್ನಲಾಗುವುದು).

(ರೈತ ಮತ್ತು ಕಂಪನಿ ಇವುಗಳಲ್ಲಿ ಒಂದೊಂದನ್ನೂ ಪ್ರತ್ಯೇಕವಾಗಿ 'ಕಕ್ಷಿ' ಯೆಂದೂ, ಜಂಟಿಯಾಗಿ 'ಕಕ್ಷಿಗಳು' ಎಂದೂ ಉಲ್ಲೇಖಿಸಲಾಗುವುದು).

**ಪೀಠಿಕೆ**

ಕಂಪನಿಯು ಭಾರತದಲ್ಲಿ /ಭಾರತದಿಂದ ಜಾಗತಿಕ ಗುಣಮಟ್ಟದ ಹಣ್ಣುಗಳನ್ನು ಉತ್ಪಾದಿಸುವ ಆಧುನಿಕ ತಂತ್ರಜ್ಞಾನ ಮತ್ತು ಉತ್ಪಾದನಾ ವಿಧಾನಗಳನ್ನು ಪರಿಚಯಿಸಲು ರೈತರೊಂದಿಗೆ ಕೆಲಸಮಾಡುವ ಉದ್ದೇಶ ಹೊಂದಿದೆ.

__________________________ ಇವರ ಮಗ/ಮಗಳು/ ಹೆಂಡತಿಯಾದ _____________________ ಜಿಲ್ಲೆಯ _________ ತಾಲ್ಲೂಕಿನ ____________ ಗ್ರಾಮದ ನಿವಾಸಿಯಾದ ರೈತ ಶ್ರೀ / ಶ್ರೀಮತಿ ________________ ಇವರು ____________ ರಾಜ್ಯ ____________ ಜಿಲ್ಲೆ_______________ ತಾಲ್ಲೂಕು ____________ ಗ್ರಾಮದ ವ್ಯಾಪ್ತಿಯಲ್ಲಿ __________________ ರೆವೆನ್ಯೂ ಸರ್ವೇ ಸಂಖ್ಯೆಯನ್ನು/ಗಳನ್ನು ಹೊಂದಿರುವ ______________ ಎಕರೆ ಜಮೀನು ಹೊಂದಿದ್ದು, ಈ ಜಮೀನಿನಲ್ಲಿ ಬಾಳೆ ಕೃಷಿ ಮಾಡಲು ಉತ್ಸುಕರಾಗಿದ್ದಾರೆ ಹಾಗೂ ಉತ್ತಮ ಗುಣಮಟ್ಟದ ಬಾಳೆ ಹಣ್ಣುಗಳನ್ನು ಉತ್ಪಾದನೆಗೆ ಮತ್ತು ತಮ್ಮ ಉತ್ಪನ್ನದ ಮಾರಾಟಗಾರಿಕೆಗೆ ಕಂಪನಿಯು ಮಾರ್ಗದರ್ಶನ ಮಾಡಬೇಕೆಂದು ಬಯಸುತ್ತಾರೆ.

ಆದ್ದರಿಂದ, ಈಗ, ಈ ಕಕ್ಷಿಗಳು ಈ ಮುಂದಿನಂತೆ ಒಪ್ಪುತ್ತಾರೆ:

1. ವ್ಯಾಖ್ಯೆಗಳು:

   1.1 'ಒಪ್ಪಂದ' ಎಂದರೆ ಬಾಳೆಹಣ್ಣು ಉತ್ಪಾದನೆ ಮತ್ತು ಖರೀದಿಗಾಗಿ ಒಪ್ಪಂದ ಮಾತ್ರ.

1.2 'ಬಾಳೆ' ಎಂದರೆ ಕ್ಯಾವಂಡಿಷ್ ಪ್ರ ಪ್ರಭೇದದ ಗ್ರ್ಯಾಂಡ್ ನೈನ್ (ಜಿ 9) ಮಾದರಿಯ ಬಾಳೆಹಣ್ಣು ಅಥವಾ ಕಂಪನಿಯು ಯುಕ್ತವೆಂದು ಭಾವಿಸಿ ಹಾಗೆಂದು ಒಪ್ಪಂದದ ಅವಧಿಯಲ್ಲಿ ಕಾಲಕಾಲಕ್ಕೆ ರೈತನಿಗೆ ತಿಳಿಸುವ ಇತರ ಯಾವುದೇ ಮಾದರಿಯ ಬಾಳೆಹಣ್ಣು.

1.3 'ಕಕ್ಷಿಗಳು' ಎಂದರೆ ರೈತ ಮತ್ತು ಕಂಪನಿ ಹಾಗೂ 'ಕಕ್ಷಿ' ಎಂದರೆ ರೈತ ಅಥವಾ ಕಂಪನಿ.

1.4 'ಉತ್ಪನ್ನ' ವೆಂದರೆ ಈ ಒಪ್ಪಂದದಲ್ಲಿ ನಿರ್ದೇಶಿಸಲಾದ ಜಮೀನಿನಲ್ಲಿ ಕುಯ್ಲಿಗೆ ಸಿದ್ಧವಾದ ಅಥವಾ ಅಲ್ಲಿ ಕುಯ್ಲು ಮಾಡಿದ ಬಾಳೆಹಣ್ಣುಗಳು.

1.5 'ಬಟವಾಡೆಯ ಸ್ಥಳ' (point of delivery) ಎಂದರೆ ರೈತನು ಬಾಳೆಹಣ್ಣುಗಳನ್ನು ಕುಯ್ಲುಮಾಡುವ ಸ್ಥಳ.

1.6 'ಪರಿಯೋಜನೆ' ಎಂದರೆ ಹಾಲಿ ಒಪ್ಪಂದದ ಮೇರೆಗೆ ರೈತರು ಕೈಗೊಳ್ಳುವ ಕೃಷಿ ಮತ್ತು ಹಾಲಿ ಒಪ್ಪಂದದಂತೆ ಕಂಪನಿಯು ಉತ್ಪನ್ನವನ್ನು ಖರೀದಿಸಲು ಮಾಡಿಕೊಂಡ ವ್ಯವಸ್ಥೆ.

1.7 'ಗರಿಷ್ಠ ಗಸಿ ಮಿತಿ' (maximum residue limit) ಎಂದರೆ ಆಹಾರ ಸುರಕ್ಷಾ ಮತ್ತು ಮಾನಕಗಳ ಅಧಿನಿಯಮ (Food Safety and Standards Act) ಅಥವಾ ಬಾಳೆಹಣ್ಣು ಪರೀಕ್ಷೆ ಕುರಿತಂತೆ ಭಾರತದ ಇತರ ಯಾವುದೇ ಕಡ್ಡಾಯ ಮಾನದಂಡದಂತೆ ನಿರ್ಧರಿಸಿದ ಅಥವಾ ರಫ್ತಿನ ಸಂದರ್ಭದಲ್ಲಿ ಬಾಳೆಹಣ್ಣು ಮಾರಾಟದ ಮೂಲಕ ವಿತರಣೆಯಾಗಬೇಕಾದ ಪ್ರದೇಶದ ಮಾರುಕಟ್ಟೆಯು ನಿಗದಿ ಮಾಡಿದ ರಾಸಾಯನಿಕ ಶೇಷದ ಗರಿಷ್ಠ ಮಿತಿ.

1.8 'ಕತ್ತರಿಸುವ ಆದೇಶ' ಎಂದರೆ-

ಎ. ಬಾಳೆಯನ್ನು ಕೊಯ್ಲು ಮಾಡುವ/ಚಿಪ್ಪುಗಳನ್ನು ಕತ್ತರಿಸುವ ದಿನಾಂಕ ಮತ್ತು ಸಮಯ, ಹಾಗೂ

ಬಿ. ಬಾಳೆಹಣ್ಣುಗಳ ದರ್ಜೆ ಮತ್ತು ವಯಸ್ಸು

-ಇವುಗಳನ್ನು ನಿರ್ದಿಷ್ಟಪಡಿಸುವ ಕಂಪನಿಯ ಲಿಖಿತ ಸೂಚನೆಗಳು.

1.'9 'ತಿರಸ್ಕೃತಿಗಳು' (rejects) ಎಂದರೆ ಕಂಪನಿಯು ನಿರ್ಧರಿಸಿದಂತೆ ಇಲ್ಲಿರುವ ಅನುಬಂಧ 'ಡಿ' ಯಲ್ಲಿ ಸ್ಪಷ್ಟಪಡಿಸಿರುವಂತೆ ಗುಣಮಟ್ಟದ ಶಿಷ್ಟತೆಗಳಿಗೆ ಹೊಂದಿಕೆಯಾಗದಿರುವ ಬಾಳೆಹಣ್ಣುಗಳು.

1.10 'ನಿಲುಗಡೆ ಆದೇಶ' ಎಂದರೆ ಕಂಪನಿಗೆ ಬಟವಾಡೆ ಮಾಡಬೇಆದ ಬಾಳೆಗೊನೆಗಳ ಕಟಾವನ್ನು ಯಾವುದೇ ಸಮಯದಲ್ಲಿ ತತ್ಕ್ಷಣ ನಿಲ್ಲಿಸುವಂತೆ ಕಂಪನಿಯು ರೈತನಿಗೆ ನೀಡಿದ ಅಥವಾ (ಮೊದಲು ಕಟಾವು ಆದೇಶ ನೀಡಿದ್ದು ಅನಂತರ) ಕಟಾವು ಸಮಯದವರೆಗೆ ಯಾವುದೇ ಸಮಯದಲ್ಲಿ ನೀಡಬಹುದಾದ ಲಿಖಿತ ಸೂಚನೆ. ನಿಗದಿತ ತಂತ್ರಜ್ಞಾನದ ಬಳಕೆ ಮಾಡದಿದ್ದರೆ ಅಥವಾ ಕಂಪನಿಯ ಸೂಚನೆಗಳನ್ನು ರೈತನು ಪಾಲಿಸದಿದ್ದರೆ ಇಲ್ಲಿ ಕೊಟ್ಟಿರುವ ಅನುಬಂಧ 'ಸಿ'ಯಲ್ಲಿ ನಿಗದಿ ಪಡಿಸಲಾದಂತೆ 'ಕೆಂಪು ಸೂಚನೆ' (ರೆಡ್ ರೇಟಿಂಗ್) ನೀಡಿದ ನಂತರ ಇಂಥ 'ನಿಲುಗಡೆ ಆದೇಶ' ಕೊಡಬಹುದು.

1.11 ಕಂಪನಿಯ ಅಥವಾ ನಿಗಮವೊಂದರ 'ಮುಕ್ತಾಯ' (winding up), 'ವಿಲಯನ' (dissolution), (insolvency) ಅಥವಾ 'ಪುನಸ್ಸಂಘಟನೆ' (re-organisation) ಎಂದರೆ ಆ ಕಂಪನಿ ಅಥವಾ ನಿಗಮವು ಯಾವ ಸ್ಥಳದಲ್ಲಿ ಸ್ಥಾಪಿತವಾಗಿದೆಯೋ ಅಥವಾ ಕಾರ್ಯನಿರ್ವಹಿಸುತ್ತಿದೆಯೋ ಆ ಸ್ಥಳವು ಯಾವ ವ್ಯಾಪ್ತಿಗೆ ಬರುವುದೋ ಅಲ್ಲಿಯ

ಕಾನೂನಿನ ಮೇರೆಗೆ ಅವಸಾಯನ (liquidation), ಮುಕ್ತಾಯ, ಪುನಸ್ಸಂಘಟನೆ, ವಿಲಯನ, ಏರ್ಪಾಡು (arrangement), ರಕ್ಷಣೆ ಅಥವಾ ಸಾಲಗಾರರಿಂದ ಬಿಡುಗಡೆಗೆ ಕೋರಿಕೆ ಸೇರಿದಂತೆ ಯಾವುದೇ ಪ್ರಕ್ರಿಯೆ.

## 2. ಒಪ್ಪಂದದ ಅವಧಿ

2.1 ಈ ಒಪ್ಪಂದವು ದಿನಾಂಕ ______________ ರಿಂದ ಜಾರಿಗೆ ಬರತಕ್ಕದ್ದು.

2.2. ಸಂಸ್ಕರಣದ ಅವಧಿ, ದೇಶೀಯ ಮಾರುಕಟ್ಟೆಯಲ್ಲಿ ಮಾರಾಟ ಅಥವಾ ಅಂತರರಾಷ್ಟ್ರೀಯವಾಗಿ ರಫ್ತು ಒಳಗೊಂಡಂತೆ ಒಂದು ಬೆಳೆ ಋತುವಿನ ಅವಧಿಯಲ್ಲಿ ತಾವು ಒಟ್ಟಾಗಿ ಕೆಲಸಮಾಡತಕ್ಕದ್ದೆಂದು ಎಂದು ಕಕ್ಷಿಗಳು ಒಪ್ಪುತ್ತಾರೆ. ಭೂಮಿಯನ್ನು ಬಾಳೆಹಣ್ಣುಗಳ ಕೃಷಿ ಹಾಗೂ ಉತ್ಪಾದನೆಗೆ ಮೀಸಲಾಗಿಡಲು ಮತ್ತು ಒಪ್ಪಂದದ ಅವಧಿಯಲ್ಲಿ ಕಂಪನಿಯ ಜೊತೆಗೆ ನಿರಂತರವಾಗಿ ಕೆಲಸಮಾಡುವುದಾಗಿ ರೈತನು/ಳು ಒಪ್ಪುತ್ತಾನೆ/ಒಪ್ಪುತ್ತಾಳೆ.

2.3 ಒಪ್ಪಂದ ಮಾಡಿಕೊಂಡ ದಿನಾಂಕದಿಂದ ಮೊದಲನೆಯ ಕಟಾವಿಗಾಗಿ ತಾವು ಒಟ್ಟಾಗಿ ಕೆಲಸ ಮಾಡುವುದಾಗಿಯೂ ಕಕ್ಷಿಗಳು ಒಪ್ಪುತ್ತಾರೆ. ಈ ಅನುಭವವನ್ನಾಧರಿಸಿ ಮುಂದಿನ ವರ್ಷಕ್ಕೆ ಒಪ್ಪಂದವನ್ನು ಮುಂದುವರೆಸಬೇಕೇ ಅಥವಾ ಬೇಡವೇ ಎರಡೂ ಕಕ್ಷಿಗಳು ಪರಸ್ಪರ ಮಾತುಕತೆಯಿಂದ ನಿರ್ಧರಿಸುತ್ತಾರೆ.

2.4 ಕಕ್ಷಿಗಳು ಒಪ್ಪಂದವನ್ನು ಇನ್ನೊಂದು ಬೆಳೆ ಅವಧಿಗೆ ವಿಸ್ತರಿಸಬಹುದು.

## 3. ಕೃಷಿ ಉತ್ಪನ್ನದ ವಿವರ

3.1 ಈ ಒಪ್ಪಂದವು ಕ್ಯಾವಂಡಿಷ್ ಪ್ರಭೇದದ ಗ್ರ್ಯಾಂಡ್ ನೈನ್ (G 9) ಅಥವಾ ಕಂಪನಿಯು ತನ್ನದೇ ವಿವೇಚನೆಯಂತೆ ಕೃಷಿಗೆ ಯೋಗ್ಯವೆಂದು ಭಾವಿಸುವ ಯಾವುದೇ ಇತರ ಪ್ರಭೇದದ ಬಾಳೆಹಣ್ಣಿಗೆ ಸೀಮಿತವಾಗಿರುತ್ತದೆ.

## 4. ಗುಣಮಟ್ಟ ನಿಗದಿ

4.1 ಅನುಬಂಧ 'ಡಿ' ಯಲ್ಲಿ ಹೇಳಲಾದ ಮಾನದಂಡಗಳಿಗೆ ಹೊಂದುವ ಬಾಳೆಹಣ್ಣುಗಳನ್ನು ಮಾತ್ರ ಸ್ವೀಕರಿಸಲಾಗುವುದು. ಸೀಳಾದ, ಹಾನಿಗೊಂಡ, ಅಥವಾ ಅತಿ ಮಾಗಿದ ಮತ್ತು ಸಿಪ್ಪೆಯ ಬಣ್ಣ ಅಸಮರ್ಪಕವಾದ ಹಣ್ಣುಗಳನ್ನು ಸ್ವೀಕರಿಸಲಾಗುವುದಿಲ್ಲ.

4.2 ಬಿಸಿಲಿಗೆ ಕಂದು ತಿರುಗಿದ (sun burn) ಬಾಳೆ ಹಣ್ಣುಗಳನ್ನು ಸ್ವೀಕರಿಸಲಾಗುವುದಿಲ್ಲ.

4.3 ಅನುಬಂಧ 'ಡಿ' ಯಲ್ಲಿ ಹೇಳಲಾದ ಮಾನದಂಡಗಳಿಗೆ ಹೊಂದದಿರುವ ಯಾವ ಉತ್ಪನ್ನವನ್ನೂ ಸ್ವೀಕರಿಸಲಾಗುವುದಿಲ್ಲ.

## 5. ಪಾತ್ರಗಳು ಮತ್ತು ಹೊಣೆಗಳು (Roles and Responsibilities)

5.1 ಆರಂಭದಲ್ಲಿ ತಿಳಿಸಿದ ಜಮೀನಿನಲ್ಲಿ ಅನುಬಂಧ 'ಡಿ' ಯಲ್ಲಿನ ಕಂಪನಿಯ ಗುಣಮಟ್ಟ ನಿರ್ದೇಶಗಳಂತೆ ಬಾಳೆಹಣ್ಣನ್ನುಬೆಳೆದು ಕಟಾವು ಮಾಡುವುದಾಗಿ ರೈತನು ಒಪ್ಪುತ್ತಾನೆ. ನೆಡಬೇಕಾದ ಜೀವಕೋಶಾಭಿವರ್ಧನೆ (tissue

culture) ಮಾಡಿದ ಬಾಳೆಗಿಡಗಳನ್ನು ಕಂಪನಿಯಿಂದ ಯಾವುದೇ ಮಧ್ಯಸ್ಥಿಕೆ ಇಲ್ಲದೆ ರೈತನ ಸ್ವಂತ ವಿವೇಚನೆಯ ಮೇರೆಗೆ ಖರೀದಿಸಲಾಗುವುದು.

5.2 ರೈತನು ಕಂಪನಿ ಅಥವಾ ಅದರ ತಾಂತ್ರಿಕ ಸೇವಾ ವಿತರಕ (service provider) ಶಿಫಾರಸುಮಾಡಿದ ಸಾಮಗ್ರಿ ಮತ್ತು ರಾಸಾಯನಿಕಗಳ ಬಳಕೆ, ಕಾನೂನಿನ ಅಗತ್ಯದಂತೆ ಸುರಕ್ಷತಾ ಸಲಕರಣೆಗಳ ಬಳಕೆಯೂ ಒಳಗೊಂಡಂತೆ ಕಂಪನಿ ಅಥವಾ ಅದರ ತಾಂತ್ರಿಕ ಸೇವಾ ವಿತರಕರು ನಿಗದಿಪಡಿಸಿದ ತಂತ್ರಜ್ಞಾನ ಮತ್ತು ಉತ್ಪಾದನೆಯ ಪದ್ಧತಿಯನ್ನು ಪಾಲಿಸತಕ್ಕದ್ದು. ಕಂಪನಿಯು ಅಂಥ ನಿರ್ದೇಶನಗಳನ್ನು ಮತ್ತು ಕಾರ್ಯಾಚರಣೆಗಳನ್ನು ರೈತನಿಗೆ ಲಿಖಿತರೂಪದಲ್ಲಿ ಸ್ಪಷ್ಟವಾಗಿ ತಿಳಿಸತಕ್ಕದ್ದು. ಪರಿಯೋಜನೆಯ ಅವಧಿಯಲ್ಲಿ ಅಂಥ ನಿರ್ದೇಶಗಳು ಬದಲಾಗಬಹುದು.

5.3 ಪರಿಯೋಜನೆಯ ಎಲ್ಲ ರೀತಿಯ ಅಭಿವೃದ್ಧಿ, ಭೂ ಅಭಿವೃದ್ಧಿ, ಮೂಲಸೌಕರ್ಯಗಳ ಅಭಿವೃದ್ಧಿ, ಗುಣಮಟ್ಟದ ಸಸಿ ನೆಡುವ ಸಾಮಗ್ರಿ ಮತ್ತು ತೋಟಗಾರಿಕೆ, ಗಿಡಗಳ/ಹಣ್ಣಿನ ರಕ್ಷಣಾ ಕಾರ್ಯಗಳು, ಗೊಬ್ಬರ ಮತ್ತು ಪೋಷಕಾಂಶಗಳು, ಹನಿ ನೀರಾವರಿಯ ಸ್ಥಾಪನೆ ಮತ್ತು ನಿರ್ವಹಣೆ, ನೀರಾವರಿಯ ವ್ಯವಸ್ಥೆ, ಕಳೆ ನಿಯಂತ್ರಣ ಮತ್ತು ನಿರ್ವಹಣೆ, ನೈರ್ಮಲ್ಯ, ರೋಗ ಮತ್ತು ಕೀಟ ನಿರ್ವಹಣೆ, ಕುಯ್ಲು ಮತ್ತು ಗುಣಮಟ್ಟದ ಉತ್ಪಾದನೆಗೆ ಅಗತ್ಯವಾದ ಇತರ ಯಾವುದೇ ಕಾರ್ಯಾಚರಣೆಗಳೂ ಒಳಗೊಂಡಂತೆ ಕುಯ್ಲು ಪೂರ್ವದ ಮತ್ತು ಕುಯ್ಲು ಕಾರ್ಯಗಳನ್ನು ರೈತನು ನಿರ್ವಹಿಸಬೇಕು.

5.4 ಕಂಪನಿ ಪ್ರತಿನಿಧಿಯ ಮೇಲುಸ್ತುವಾರಿಯಲ್ಲಿ ಬಾಳೆಯ ಕವಲುಗಳ ಆಯ್ಕೆಗೆ (sucker selection) ಕೆಲಸಗಾರನ ಮತ್ತು ಅದಕ್ಕೆ ಅಗತ್ಯವಾದ ಉಪಕರಣಗಳನ್ನು ರೈತನು ತನ್ನ ವೆಚ್ಚದಲ್ಲಿ ವ್ಯವಸ್ಥೆಮಾಡತಕ್ಕದ್ದು.

5.5 ಆದಾಗಿಯೂ, ಕಂಪನಿಯು ತನ್ನ ವೆಚ್ಚದಲ್ಲಿ ಮೊಗ್ಗು ಚುಚ್ಚುಮದ್ದು, ಗೊನೆಗೆ ಸಿಂಪಡಣೆ, ಹೂವು ಕಳೆಯುವುದು, ಹಣ್ಣಿನ ತಡೆಗಳ ನಿವಾರಣೆ, ಹುಸಿ ಚಿಪ್ಪುಗಳ ನಿವಾರಣೆ, ಟೇಪು ಕಟ್ಟುವುದು, ಗೊನೆಗೆ ಚೀಲ ಕಟ್ಟುವುದು - ಇಂತಹ ಹಣ್ಣು ರಕ್ಷಣಾ ಕಾರ್ಯಗಳನ್ನು ಜಾರಿಗೊಳಿಸಲು ನೇರವಾಗಿ ನೇಮಿಸಿದ ಕೆಲಸಗಾರರ ಮೂಲಕ ಅಥವಾ ಯಾವುದಾದರೂ ಅಭಿಕರಣದ (ಏಜೆನ್ಸಿಯ) ಮೂಲಕ (ಕೂಲಿ ಮತ್ತು ಹಣ್ಣು ರಕ್ಷಣೆಗೆ ಅಗತ್ಯವಾದ ರಾಸಾಯನಿಕಗಳು ಮೊಗ್ಗು ಚುಚ್ಚುಮದ್ದು, ಗೊನೆ ಸಿಂಪಡಣೆಗಳು, ಗೊನೆ ಚೀಲ, ಟೇಪು ಮತ್ತು ಸಿಂಪಡಿಸುವ ಪಂಪುಗಳು ಮೊದಲಾದವುಗಳ ಖರ್ಚು ಸೇರಿ) ತನ್ನ ವೆಚ್ಚದಲ್ಲಿ ನೆರವು ನೀಡತಕ್ಕದ್ದು; ಆದರೆ ಅಗತ್ಯವಾದಷ್ಟು ಸಂಖ್ಯೆಯ ಕೂಲಿಕಾರರನ್ನು ಸಕಾಲದಲ್ಲಿ ವ್ಯವಸ್ಥೆಗೊಳಿಸಲು ಮತ್ತು ಹಣ್ಣುರಕ್ಷಣಾ ಚಟುವಟಿಕೆಗಳನ್ನು ಜಾರಿಗೊಳಿಸಲು ರೈತನೂ ಜವಾಬ್ದಾರನಾಗಿರುತ್ತಾನೆ. ಕೂಲಿ ಮತ್ತು ಹಣ್ಣು ರಕ್ಷಣೆಗೆ ಬೇಕಾದ ಸಾಮಗ್ರಿ ಮುಂತಾದವುಗಳ ಎಲ್ಲ ವೆಚ್ಚವನ್ನೂ ಒಪ್ಪಂದದಲ್ಲಿರುವ ನಿಯಮಗಳಂತೆ ಕಂಪನಿ ನೀಡಬಹುದು ಅಥವಾ ಅದಕ್ಕೆ ಸರಕಾರವು ಹಣಕಾಸು ನೆರವು ಒದಗಿಸಬಹುದು ಅಥವಾ ಕಂಪನಿಯು ಮುಂಗಡವಾಗಿ ಕೊಡಬಹುದು ಅಥವಾ ರೈತನು ಭರಿಸಬಹುದು.

5.6 ನೇರವಾಗಿ ಸೂರ್ಯನ ಕಿರಣಗಳಿಗೆ ಒಡ್ಡಿಕೊಂಡಿರುವ ಗೊನೆಗಳನ್ನು ರೈತನ ಸ್ವಂತ ಖರ್ಚಿನಲ್ಲಿ ವೃತ್ತ ಪತ್ರಿಕೆಗಳಿಂದ ಮುಚ್ಚುವುದು.

5.7 ರೈತನು ತನ್ನ ಸ್ವಂತ ಖರ್ಚಿನಲ್ಲಿ ಗೊನೆಗಳು ಮಗುಚಿ ಬೀಳುವ ಸಂದರ್ಭವನ್ನು ತಪ್ಪಿಸಲು ಅವಕ್ಕೆ ಆನಿಕೆಗಳನ್ನು ಕೊಡುವುದು ಮತ್ತು ಹಗ್ಗ ಬಿಗಿಯುವುದು.

5.8 ರೈತನು ತನ್ನ ಸ್ವಂತ ಖರ್ಚಿನಲ್ಲಿ ಬೆಳೆ ವಿಮೆ ಮಾಡಿಸಬಹುದು.

5.9 ರೈತನು ತನ್ನ ಸ್ವಂತ ಖರ್ಚಿನಲ್ಲಿ ಮಣ್ಣು, ಎಲೆ ಮತ್ತು ನೀರಿನ ವಿಶ್ಲೇಷಣೆ ಮಾಡಿಸತಕ್ಕದ್ದು.

5.10 ಜಾಗತಿಕ ಕೃಷಿ ಆಚರಣೆ (G.A.P.) ಪ್ರಮಾಣಪತ್ರ, ಇದ್ದಲ್ಲಿ, ಪಡೆಯಲು ಅಗತ್ಯವಾದ ಎಲ್ಲ ಕಾರ್ಯಗಳನ್ನೂ ಪೂರೈಸಬೇಕು.

5.11 ಬಾಳೆಹಣ್ಣಿನಲ್ಲಿ ರಾಸಾಯನಿಕ ಶೇಷವು ಅನುಮತಿಸಲಾದ ಮಿತಿಯೊಳಗಿರುವಂತೆ (ಅಗತ್ಯವಾದಲ್ಲಿ) ಕಂಪನಿಯ ಪ್ರತಿನಿಧಿಯ ಮೇಲುಸ್ತುವಾರಿಯಲ್ಲಿ ರೈತನು ಅಗತ್ಯವಾದ ಎಲ್ಲ ಮುನ್ನೆಚ್ಚರಿಕೆಗಳನ್ನೂ ತೆಗೆದುಕೊಳ್ಳಬೇಕು.

5.12 ಉತ್ಪಾದನೆಯ ನಂತರ, ಗುಣಮಟ್ಟದ ಅಗತ್ಯಗಳ ಪೂರೈಕೆಗಾಗಿ ಕಂಪನಿಯು ಬಾಳೆ ಉತ್ಪನ್ನವನ್ನು ತನ್ನ ಸ್ವಂತ ವೆಚ್ಚದಲ್ಲಿ ಪರಿವೀಕ್ಷಿಸಬಹುದು.

5.13 ಈ ಮುಂದಿನ ಚಟುವಟಿಕೆಗಳನ್ನೂ ಒಳಗೊಂಡು, ಆದರೆ ಇಷ್ಟಕ್ಕೇ ಮಿತಿಗೊಳದಂತೆ, ಕಂಪನಿಯು ತನ್ನ ಸ್ವಂತ ಖರ್ಚಿನಲ್ಲಿ ಮತ್ತು ತನ್ನದೇ ಜವಾಬ್ದಾರಿಯಲ್ಲಿ ಎಲ್ಲ ಕುಯಿಲೋತ್ತರ ಚಟುವಟಿಕೆಗಳನ್ನೂ ನಡೆಸಬೇಕು:

5.13.1 ವಿಂಗಡಣೆ (sorting) / ಶ್ರೇಣೀಕರಣ (grading) / ಕ್ಷೇತ್ರ ಮಟ್ಟದಲ್ಲಿ ಒಟ್ಟುಗಟ್ಟುವಿಕೆ (packing at field level)

5.13.2 ಉತ್ಪನ್ನವನ್ನು ವಿತರಣೆ ಕೇಂದ್ರಕ್ಕೆ ಸಾಗಿಸುವುದು

5.13.3 ಶೀತಲೀಕರಣ ಪೂರ್ವದ ಮತ್ತು ಶೈತ್ಯಾಗಾರದ (cold storage) ಕಾರ್ಯಾಚರಣೆಗಳು

5.13.4 ಒಟ್ಟುಗಟ್ಟುವ ಗೃಹದ (packing house) ಕಾರ್ಯಾಚರಣೆ

5.13.5 ರಫ್ತು ಮತ್ತು ದೇಶೀಯ ಮಾರಾಟಗಳು

5.14 ಗುಣಮಟ್ಟ ಉತ್ಪನ್ನಕ್ಕಾಗಿ ರೈತರಿಗೆ ಮಾರ್ಗದರ್ಶನ ನೀಡಲು ಕಂಪನಿಯು ಬಾಳೆಕೃಷಿಯಲ್ಲಿ ಅನುಭವವುಳ್ಳ ತಂತ್ರನಿಪುಣ ವ್ಯಕ್ತಿಯ ವ್ಯವಸ್ಥೆ ಮಾಡತಕ್ಕದ್ದು.

5.15 ಪರಿಯೋಜನೆಯಲ್ಲಿ ಕಾಲಕಾಲಕ್ಕೆ ಸರಕಾರದ ನಿಯಮಗಳಂತೆ/ಮಾನದಂಡಗಳಂತೆ ಅರ್ಹ ರೈತರ ವಿವಿಧ ಚಟುವಟಿಕೆಗಳಿಗೆ ತೋಟಗಾರಿಕೆ ಇಲಾಖೆ ಮತ್ತು ಸಂಬಂಧಿತ ಸರಕಾರದೊಡನೆ ಸಮನ್ವಯತೆ ಸಾಧಿಸಿ ಹಣಕಾಸು ನೆರವು ಒದಗಿಸಲು ಕಂಪನಿಯು ನೆರವಾಗತಕ್ಕದ್ದು.

5.16 ಕಂಪನಿಯು ರಾಜ್ಯ/ಕೇಂದ್ರ ಸರಕಾರದ ಸಮನ್ವಯದೊಂದಿಗೆ ಅಥವಾ ತನ್ನ ಖರ್ಚಿನಲ್ಲಿ ತರಬೇತಿಗಳು, ಕ್ಷೇತ್ರ ಬೇಟಿ ಮತ್ತು ಪ್ರಾತ್ಯಕ್ಷಿಕೆಗಳನ್ನು ವ್ಯವಸ್ಥೆ ಮಾಡಬಹುದು.

5.17 ಈ ಒಪ್ಪಂದದಲ್ಲಿ ಎಲ್ಲಾದರೂ ಇನ್ನೇನೇ ಹೇಳಿದ್ದರೂ ಒಪ್ಪಿಗೆಯ ನಂತರ ಕಂಪನಿಗೆ ಉಂಟಾಗಬಹುದಾದ ಯಾವುದೇ ನಷ್ಟ ಅಥವಾ ಹಾನಿಗೆ ರೈತನು ಯಾವುದೇ ರೀತಿಯಲ್ಲಿ ಜವಾಬ್ದಾರನಾಗಿರುವುದಿಲ್ಲ ಮತ್ತು ಕುಯಿಲೋತ್ತರ ಚಟುವಟಿಕೆಗಳು, ಮಾರಾಟಗಳು, ರವಾನೆ, ಶೇಖರಣೆ ಮುಂತಾದವುಗಳ ವೆಚ್ಚ ಮತ್ತು ನಷ್ಟಸಂಭಾವ್ಯತೆಗಳನ್ನು ಕಂಪನಿಯೊಂದೇ ಜವಾಬ್ದಾರಿ ವಹಿಸತಕ್ಕದ್ದು.

5.18 ಬಾಳೆಹಣ್ಣಿನ ಉತ್ಪನ್ನಕ್ಕೆ, ಉತ್ಪಾದನಾ ಸ್ಥಳಕ್ಕೆ, ಆಸ್ತಿಗಳಿಗೆ ಮತ್ತು ತಾನು ಒದಗಿಸಿದ ಆದಾನಗಳ (inputs) ಕಾನೂನಿಕ ಪರಿಣಾಮವಾಗಿ (legal consequences) ಉಂಟಾಗಬಹುದಾದ ನಷ್ಟ ಅಥವಾ ಅದಕ್ಕೆ ತಗಲುವ ಯಾವುದೇ ಹಾನಿಗೆ ಸಾಮಾನ್ಯವಾಗಿ ಕಂಪನಿಯು ಹೊಣೆಗಾರನಾಗಿರುತ್ತದೆ.

## 6. ಬೆಳೆಯ ಬಟವಾಡೆ

6.1 ರೈತ ಮತ್ತು ಕಂಪನಿ ಪರಸ್ಪರ ಒಪ್ಪಿದಂತೆಯೇ ಕುಯಿಲು ಕಾರ್ಯವನ್ನು ನಡೆಸತಕ್ಕದ್ದು. ಕುಯಿಲನ್ನು ಕಂಪನಿಯ ಅಧಿಕೃತ ಪ್ರತಿನಿಧಿಯ ಸಮ್ಮುಖದಲ್ಲಿ ಮಾಡತಕ್ಕದ್ದು. ಈ ಒಪ್ಪಂದದ ಅವಧಿಯಲ್ಲಿನ ಯಾವುದೇ ಕಾಲದಲ್ಲಿ ರೈತನು ತಾನೇ ಅಥವಾ ಇತರ ಯಾವುದೇ ಕಕ್ಷಿಯ ಮೂಲಕ ಕಂಪನಿಗೆ ನೀಡಬೇಕಾಗಿರುವ ಉತ್ಪನ್ನವನ್ನದ ಯಾವುದೇ ಭಾಗವನ್ನು ಮೂರನೆಯ ಕಕ್ಷಿಗೆ ಮಾರತಕ್ಕದ್ದಲ್ಲ.  ಕಂಪನಿಯ ಅನುಮತಿ ಮತ್ತು ಹಾಜರಿಯಿಲ್ಲದೆ ರೈತನು ಮಾಡುವ ಯಾವುದೇ ಕುಯ್ಲು ಒಪ್ಪಂದದ ಭಂಗವಾಗುತ್ತದೆ ಮತ್ತು ಕಂಪನಿಯು ಒಪ್ಪಂದದ ಭಂಗಕ್ಕೆ ತಕ್ಕ ಕ್ರಮಗಳನ್ನು ಕೈಗೊಳ್ಳಬೇಕು.

6.2 ತನ್ನ ತೋಟದಲ್ಲಿ ಬಾಳೆಯ ಕುಯ್ಲಿಗೆ ರೈತನು ತನ್ನ ವೆಚ್ಚದಲ್ಲಿ ಕೆಲಸಗಾರರನ್ನು ವ್ಯವಸ್ಥೆಮಾಡಬೇಕು.

6.3 (ಎ,ಬಿ ಮತ್ತು ಸಿ ದರ್ಜೆಗಳ)  ಬಾಳೆ ಹಣ್ಣುಗಳನ್ನು/ಗೊನೆಗಳನ್ನು ಬಾಳೆ ತೋಟದಿಂದ ಹೊರಕ್ಕೆ ಸಾಗಿಸಲು ಕಂಪನಿಯು ಚಾಲ್ತಿಯಲ್ಲಿರುವಂತೆ ಕಿಲೋಗೆ ರೂ. ____ ರಂತೆ ನಿಶ್ಚಿತ ದರದಲ್ಲಿ ಕೆಲಸಗಾರರನ್ನು ನೇಮಿಸಬೇಕು. ಈ ಸಾಗಣೆಯ ಖರ್ಚುಗಳನ್ನು ಕಂಪನಿ ಪಾವತಿಸಬಹುದು ಅಥವಾ ಒಪ್ಪಂದದಂತೆ ರೈತನು ಭರಿಸಬಹುದು.

6.4 ಸಾಗಣೆ ವಾಹನವು ತೋಟಕ್ಕೆ ಬರಲಾಗದಿದ್ದರೆ ಬಾಳೆಹಣ್ಣುಗಳನ್ನು/ಗೊನೆಗಳನ್ನು ಪ್ಯಾಕ್ ಮಾಡುವ/ಸಂಸ್ಕರಿಸುವ ಸ್ಥಳದವರೆಗೆ ಸಾಗಿಸಲು ಏರ್ಪಾಡು ಮಾಡಬೇಕು; ಇದರ ವೆಚ್ಚವನ್ನು ಕಂಪನಿಯು ಭರಿಸಬೇಕು.

6.5 ರೈತನು ಬಾಳೆಯ ಸಂಸ್ಕರಣಕ್ಕೆ (processing) ನೀರಿನ ವ್ಯವಸ್ಥೆ ಮಾಡಬೇಕು. ಇದರ ವೆಚ್ಚವನ್ನು ಕಂಪನಿಯು ಭರಿಸಬೇಕು.

6.6 ಕುಯಿಲಾದ ಉತ್ಪನ್ನವನ್ನು ಕಂಪನಿಯು ತೋಟದಲ್ಲಿ ಅನುಬಂಧ 'ಡಿ'ಯಲ್ಲಿ ನಿರ್ದಿಷ್ಟಪಡಿಸಿರುವಂತೆ ಎ, ಬಿ ಮತ್ತು ಸಿ ದರ್ಜೆಗಳಾಗಿ ವರ್ಗೀಕರಿಸುತ್ತದೆ. ವಿಂಗಡಣೆ ಮತ್ತು ವರ್ಗೀಕರಣ ಉದ್ದೇಶಕ್ಕಾಗಿ ನೀಡಬೇಕಾದ ಕೂಲಿಯನ್ನು ಮಾತ್ರ ಕಂಪನಿಯೊಂದೇ ಭರಿಸತಕ್ಕದ್ದು.

6.7 ಗುಣಮಟ್ಟ ಮತ್ತು ಪ್ಯಾಕೇಜಿಂಗ್ ಕುರಿತಂತೆ ಕಂಪನಿಯ ನಿರ್ಧಾರವು ಒಪ್ಪಂದದ ನಿಯಮಗಳಂತೆ ಮೂರನೇ ಕಕ್ಷಿಯ ಪರಿವೀಕ್ಷಣೆಗೆ (inspection) ಒಳಪಟ್ಟಿರಬಹುದು.

6.8 ಪರಿಯೋಜನೆಯ ಅವಧಿಯಲ್ಲಿ ಅನುಬಂಧ 'ಡಿ'ಯಲ್ಲಿ ನಿರ್ದಿಷ್ಟಪಡಿಸಿರುವ ಕನಿಷ್ಠ ಮಾನದಂಡಗಳಿಗೆ ಹೊಂದಿಕೆಯಾಗುವ ಬಾಳೆಹಣ್ಣುಗಳನ್ನು ಕೃಷಿ ಒಪ್ಪಂದದಂತೆ ರೈತನಿಂದ ಕಂಪನಿಯು ಖರೀದಿ ಮಾಡಲೇ ಬೇಕು.

6.9 ಕಂಪನಿಯು ಸಾಪ್ತಾಹಿಕ ಕುಯಿಲು ಕಾರ್ಯಕ್ರಮ ಪಟ್ಟಿ ತಯಾರಿಸಿ ರೈತನಿಗೆ ನೀಡಬೇಕು ಮತ್ತು ಅದರಂತೆ ಬಾಳೆಯ ಫಸಲನ್ನು ಕುಯ್ಲು ಮಾಡಿ ತೋಟದಿಂದ ಕಂಪನಿಯ ಸಾಗಣೆ ವಾಹನದವರೆಗೆ ಒಯ್ಯಲು ರೈತನು ಅನುಮತಿಸಬೇಕು.

## 7. ಬೆಲೆ ನಿರ್ಧಾರ

7.1 **ಆಯ್ಕೆ 1:** ಅನುಬಂಧ 'ಡಿ'ಯಲ್ಲಿ ತಿಳಿಸಿರುವ ಮಾನದಂಡಗಳಿಗೆ ಹೊಂದಿಕೆಯಾಗುವ ಬಾಳೆ ಹಣ್ಣುಗಳನ್ನು ಕನಿಷ್ಠ ಖಾತರಿ ಬೆಲೆಯಾದ ರೂ.__________ ರಂತೆ ಕಂಪನಿಯು ಖರೀದಿಮಾಡತಕ್ಕದ್ದು.

**ಆಯ್ಕೆ 2:** ಅನುಬಂಧ 'ಡಿ'ಯಲ್ಲಿ ತಿಳಿಸಿರುವ ಮಾನದಂಡಗಳಿಗೆ ಹೊಂದಿಕೆಯಾಗುವ ಬಾಳೆ ಹಣ್ಣುಗಳನ್ನು ಕಂಪನಿಯು ಪರಸ್ಪರ ಒಪ್ಪಿಗೆಯಾದ ಬೆಲೆಯಲ್ಲಿ ಖರೀದಿ ಮಾಡತಕ್ಕದ್ದು; ಆದರೆ ಈ ಬೆಲೆಯು ಕನಿಷ್ಠ ಖಾತರಿ ಬೆಲೆಗಿಂತ ಕಡಿಮೆಯಾಗಿರಬಾರದು.

**ಆಯ್ಕೆ 3:** ಅನುಬಂಧ 'ಡಿ'ಯಲ್ಲಿ ತಿಳಿಸಿರುವ ಮಾನದಂಡಗಳಿಗೆ ಹೊಂದಿಕೆಯಾಗುವ ಬಾಳೆ ಹಣ್ಣುಗಳನ್ನು ಕಂಪನಿಯು ಅನುಬಂಧ 'ಡಿ'ಯಲ್ಲಿ ತಿಳಿಸಿರುವ ಮಾನದಂಡಗಳಿಗೆ ಹೊಂದಿಕೆಯಾಗುವ ಬಾಳೆ ಹಣ್ಣುಗಳನ್ನು ಕಂಪನಿಯು ಕುಯ್ಲಿನ ಸಮಯದಲ್ಲಿನ ಹಾಲಿ ಮಾರುಕಟ್ಟೆ ಬೆಲೆಯಲ್ಲಿ ಖರೀದಿ ಮಾಡತಕ್ಕದ್ದು; ಆದರೆ ಈ ಬೆಲೆಯು ಕನಿಷ್ಠ ಖಾತರಿ ಬೆಲೆಗಿಂತ ಕಡಿಮೆಯಾಗಿರಬಾರದು.

**ಆಯ್ಕೆ 4:** ಅನುಬಂಧ 'ಡಿ'ಯಲ್ಲಿ ತಿಳಿಸಿರುವ ಮಾನದಂಡಗಳಿಗೆ ಹೊಂದಿಕೆಯಾಗುವ ಬಾಳೆ ಹಣ್ಣುಗಳ ಬೆಲೆಯನ್ನು ಪರಸ್ಪರ ಒಪ್ಪಿತವಾದ ಬೆಲೆ ಮತ್ತು ಒಪ್ಪಿತ ಬೆಲೆಗಿಂತ ಹೆಚ್ಚಾಗಿರುವ ಮಾರುಕಟ್ಟೆ ಬೆಲೆ- ಇವುಗಳನ್ನು ಪರಿಗಣಿಸಿ ನಿರ್ಧರಿಸಬೇಕು. ಮಾರುಕಟ್ಟೆ ಬೆಲೆಯು ಒಪ್ಪಿತವಾದ ಕನಿಷ್ಠ ಖಾತರಿ ಬೆಲೆಗಿಂತ ಒಂದು ನಿರ್ದಿಷ್ಟ ಮಿತಿಯವರೆಗೆ ಹೆಚ್ಚಾಗಿದ್ದಲ್ಲಿ ಖರೀದಿ ಬೆಲೆಯಲ್ಲಿ ವ್ಯತ್ಯಾಸ ಮಾಡಲಾಗುವುದಿಲ್ಲ. ಆದರೆ ಹಾಲಿ ಮಾರುಕಟ್ಟೆ ಬೆಲೆಯು ಪರಸ್ಪರ ಒಪ್ಪಿತವಾದ ಬೆಲೆಗಿಂತ ಇನ್ನೂ ಹೆಚ್ಚಾಗಿದ್ದರೆ ಅವುಗಳ ನಡುವಿನ ವ್ಯತ್ಯಾಸದ ಒಂದು ನಿಶ್ಚಿತ ಶೇಕಡಾವಾರು ಅಂಶವನ್ನು ಪರಸ್ಪರ ಒಪ್ಪಿತವಾದ ದರಕ್ಕೆ ಸೇರಿಸಬೇಕು.

## 8. ಪಾವತಿಯ ನಿಬಂಧನೆಗಳು

8.1 ಬಟವಾಡೆ ಪಡೆದುಕೊಂಡ ತಕ್ಷಣ ಕಂಪನಿಯು ಹಣ ಪಾವತಿ ಮಾಡಬೇಕು. ಮಾರಾಟಗಾರ ನೋಂದಾವಣೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ರೈತನಿಗೆ ಒಂದು ಮಾರಾಟಗಾರ ಕೋಡ್ ಸಂಖ್ಯೆ ನೀಡಲಾಗುವುದು. ರೈತನು ಆಧಾರ್ ಸಂಖ್ಯೆ, ಬ್ಯಾಂಕ್ ಖಾತೆಯ ವಿವರಗಳು (ನಗದು ನೀಡಲಾಗುವುದಿಲ್ಲ), ಐ.ಎಫ್.ಎಸ್.ಸಿ. ಕೋಡ್ ತಿಳಿಯಲು ರದ್ದಾದ ಚೆಕ್ ಹಾಳೆ ಮತ್ತು ಪಾವತಿ ಮಾಡಲು ಬೇಕಾದ ಆರ್.ಟಿ.ಜಿ.ಎಸ್. ವಿವರಗಳನ್ನು ನೀಡತಕ್ಕದ್ದು.

## 9. ಗೋಪ್ಯತೆ ಮತ್ತು ಸ್ಪರ್ಧಾರಾಹಿತ್ಯ

9.1 ಪರಿಯೋಜನೆಯನ್ನು ಅನುಷ್ಠಾನಗೊಳಿಸಲು ಮತ್ತು ನಿರ್ವಹಿಸಲು ಪರಿಜ್ಞಾನ (know-how) ಮತ್ತು ಮಾಹಿತಿ ಪಡೆದುಕೊಳ್ಳಲು ಕಂಪನಿಯು ಸಾಕಷ್ಟು ಹಣವನ್ನು ವಿನಿ ಯೋಜಿಸುತ್ತದೆ ಎಂದು ರೈತನು ಈ ಮೂಲಕ ಒಪ್ಪುತ್ತಾನೆ. ಆದ್ದರಿಂದ ಬಾಳೆಯ ಅಭಿವೃದ್ಧಿ, ಕುಯಿಲು-ಪೂರ್ವ ಮತ್ತು ಕುಯಿಲೋತ್ತರ ತಂತ್ರಜ್ಞಾನಗಳು ಹಾಗೂ ಕಕ್ಷಿಗಳ ನಡುವೆ ಒಪ್ಪಿತವಾದ ವಾಣಿಜ್ಯಕ ವಿಷಯಗಳು ಮತ್ತಿತರ ಸಂಗತಿಗಳನ್ನೂ ಒಳಗೊಂಡಂತೆ ಪರಿಯೋಜನೆಗೆ ಸಂಬಂಧಿಸಿದ ಯಾವುದೇ ಮತ್ತು ಎಲ್ಲ ಮಾಹಿತಿಯನ್ನು ರೈತನು ಗೋಪ್ಯವಾಗಿಡುವುದು ಅತ್ಯಗತ್ಯ. ಈ ಮೇಲೆ ತಿಳಿಸಿದ ಮಾಹಿತಿಯನ್ನು ರೈತನು ಒಪ್ಪಂದದಲ್ಲಿರುವಂತೆ ಕಂಪನಿಯೊಂದಿಗೆ ಒಪ್ಪಿಕೊಂಡ ನಿಬಂಧನೆಗಳಂತೆ ಪರಿಯೋಜನೆಯ ಉದ್ದೇಶಕ್ಕೆ ಮಾತ್ರ ಬಳಸತಕ್ಕದ್ದು; ಮಾಹಿತಿಯನ್ನು ಬಹಿರಂಗ ಪಡಿಸುವುದಾಗಲೀ ಬೇರೆ ಉದ್ದೇಶಕ್ಕೆ ಬಳಸುವುದಾಗಲೀ ಮಾಡತಕ್ಕದ್ದಲ್ಲ.

9.2 ಈ ಒಪ್ಪಂದದ ಅವಧಿಯಲ್ಲಿ ರೈತನು ಕಂಪನಿಯೊಂದಿಗೆ ಜಗತ್ತಿನ ಯಾವುದೇ ಭಾಗದಲ್ಲಿ ಪ್ರತ್ಯಕ್ಷರವಾಗಿ ಅಥವಾ ಪರೋಕ್ಷವಾಗಿ ಸ್ಪರ್ಧಿಸುವಂತಿಲ್ಲ ಮತ್ತು ಅಥವಾ ಭ�ರತದಲ್ಲಿ / ಅಥವಾ ವಿದೇಶದಲ್ಲಿ ಬಾಳೆ ಅಭಿವೃದ್ಧಿ ಕುರಿತಂತೆ ರೈತನು ಮೂರನೇ ಕಕ್ಷಿಯೊಂದಿಗೆ ಸಹಕರಿಸುವಂತೆಯೂ ಇಲ್ಲ. ಅಲ್ಲದೆ, ಈ ಒಪ್ಪಂದದ ಅವಧಿಯ ನಂತರ ಯಾವುದೇ ಸಮಯದಲ್ಲಿ ರೈತನು ಕಂಪನಿಯು ಈ ಒಪ್ಪಂದದಡಿ ತನ್ನಲ್ಲಿ ಹಂಚಿಕೊಂಡ ಪರಿಣತಿಯನ್ನು ಜಗತ್ತಿನ ಯಾವುದೇ ಭಾಗದಲ್ಲಿ ಬಾಳೆಯ ಅಭಿವೃದ್ಧಿ/ಮಾರಾಟಕ್ಕಾಗಿ ಬಳಸಿಕೊಳ್ಳಲು ಯತ್ನಿಸುವಂತಿಲ್ಲ.

9.3 ಈ ಒಪ್ಪಂದದ ಅವಧಿಯಲ್ಲಿ, ರೈತನು ನೇರವಾಗಿ ಅಥವಾ ಪರೋಕ್ಷವಾಗಿ ಬಾಳೆಹಣ್ಣುಗಳನ್ನು ಮಾರಾಟದ ಉದ್ದೇಶಕ್ಕಾಗಿ ಕಂಪನಿಯ ಷರತ್ತುಬದ್ಧ ಪೂರ್ವಲಿಖಿತ ಒಪ್ಪಿಗೆಯಿದ್ದ ಹೊರತು ಕಂಪನಿಗೆ ಬಿಟ್ಟು ಬೇರಾರಿಗೂ ಮಾರುವಂತಿಲ್ಲ. ಕಂಪನಿಯು ಕೊಳ್ಳದೆ ಹೋದ ಬಾಳೆಹಣ್ಣುಗಳಿಗೆ ಲಿಖಿತ ಒಪ್ಪಿಗೆ ಅಗತ್ಯವಿರುವುದಿಲ್ಲ.

### 10. ರೈತನ ಹಕ್ಕುಗಳ ರಕ್ಷಣೆ

10.1 ಈ ಒಪ್ಪಂದವು ರೈತನು ಹೊಂದಿರುವ ತನ್ನ ಭೂಮಿಯ ಮೇಲಿನ ಒಡೆತನ ಮತ್ತು ಸ್ವಾಧೀನವನ್ನು ಯಾವುದೇ ರೀತಿಯಲ್ಲಿ ಬಾಧಿಸುವುದಿಲ್ಲ.

10.2 ಒಪ್ಪಂದದ ಅವಧಿ ಮುಗಿದಾಗ ರೈತನ ಭೂಮಿಯ ಮೇಲೆ ನಿರ್ಮಿಸಿದ ಎಲ್ಲ ಕಟ್ಟಡ ಅಥವಾ ರಚನೆಗಳನ್ನೂ (ಯಾವುದಾದರೂ ಇದ್ದಲ್ಲಿ) ಕಂಪನಿಯು ತನ್ನ ಸ್ವಂತ ಖರ್ಚಿನಲ್ಲಿ ತೆಗೆದುಹಾಕಬೇಕು.

10.3 ದೈವವಿಕೋಪದ ಕಾರಣದಿಂದ (force majeur) ಉತ್ಪನ್ನವನ್ನು ಕಂಪನಿಗೆ ನೀಡಲಾಗದಿದ್ದರೆ ಅಥವಾ ಉತ್ಪನ್ನವನ್ನು ನೀಡದಿದ್ದ ಸಂದರ್ಭದಲ್ಲಿ ಕಂಪನಿಗೆ ಉಂಟಾಗುವ ನಷ್ಟಕ್ಕೆ ರೈತನು ಹೊಣೆಗಾರನಾಗಿರುವುದಿಲ್ಲ.

### 11. ವಿವಾದ ಇತ್ಯರ್ಥ ವ್ಯವಸ್ಥೆ (dispute resolution mechanism)

11.1 ಈ ಒಪ್ಪಂದಕ್ಕೆ ಸಂಬಂಧಿಸಿದಂತೆ ಉದ್ಭವಿಸುವ ಯಾವುದೇ ವಿವಾದ, ತಕರಾರು ಅಥವಾ ಭಿನ್ನಾಭಿಪ್ರಾಯಗಳನ್ನು ಕಕ್ಷಿಗಳು ಮೊದಲಿಗೆ ರಾಜಿ ಸಂಧಾನದ ಮೂಲಕ ಅನ್ಯೋನ್ಯ ವಿಶ್ವಾಸದಿಂದ ತಮ್ಮತಮ್ಮಲ್ಲೇ ಬಗೆಹರಿಸಿಕೊಳ್ಳಲು ಯತ್ನಿಸಬೇಕು.

11.2 ಪರಸ್ಪರ ಒಪ್ಪಿಗೆಯ / ಒಪ್ಪಂದದ ಮೂಲಕ ಮೂವತ್ತು ದಿನಗಳೊಳಗೆ ವಿವಾದವನ್ನು ಇತ್ಯರ್ಥಗೊಳಿಸಿಕೊಳ್ಳುವಲ್ಲಿ ವಿಫಲವಾದರೆ, ವಿವಾದ, ತಕರಾರು ಅಥವಾ ಬಿಕ್ಕಟ್ಟನ್ನು 2020 ರ ಬೆಲೆ ಖಾತರಿ ಕುರಿತು ರೈತರ (ಸಬಲೀಕರಣ ಮತ್ತು ರಕ್ಷಣೆ) ಒಪ್ಪಂದ ಅಧಿನಿಯಮ (Act) ಹಾಗೂ ಅದರಡಿ ಮಾಡಲಾದ 2020 ರ ಬೆಲೆ ಖಾತರಿ ಕುರಿತು ರೈತರ (ಸಬಲೀಕರಣ ಮತ್ತು ರಕ್ಷಣೆ) ನಿಯಮಗಳಂತೆ ನಿಯೋಜಿಸಲಾದ ಮತ್ತು ನಿರ್ಧರಿಸಲಾದ ಪ್ರಾಧಿಕೃತ ಅಧಿಕಾರಿಯು ಅಂತಿಮವಾಗಿ ಇತ್ಯರ್ಥಗೊಳಿಸುತ್ತಾರೆ.

## 12. ಇತರ ವಿವಿಧ ವಿಷಯಗಳು

12.1 ರೈತನು ಒಬ್ಬ ಸ್ವತಂತ್ರ ಕಕ್ಷಿಯಾಗಿದ್ದಾನೆ ಮತ್ತು ಹಾಗೇ ಮುಂದುವರೆಯುತ್ತಾನೆ ಮತ್ತು ಈ ಒಪ್ಪಂದವು ಕಂಪನಿ ಮತ್ತು ರೈತನ ನಡುವೆ ಒಂದು ಸಂಘ (association), ಪಾಲುದಾರಿಕೆ (partnership) ಅಥವಾ ಜಂಟಿ ಸಹಯೋಗ (joint venture), ಯಜಮಾನ ಮತ್ತು ಅಭಿಕರ್ತ (principal and agent) ಅಥವಾ ನೌಕರಿದಾತ ಮತ್ತು ನೌಕರ - ಈ ಬಗೆಯ ಸಂಬಂಧವನ್ನುಂಟುಮಾಡುವುದೆಂದು ಭಾವಿಸತಕ್ಕದ್ದಲ್ಲ.

12.2 ಎರಡೂ ಕಕ್ಷಿಗಳು ಸಹಿಮಾಡಿದ ಲಿಖಿತ ರೂಪದಲ್ಲಲ್ಲದೆ ಈ ಒಪ್ಪಂದವನ್ನು ಮಾರ್ಪಡಿಸುವುದು, ತಿದ್ದುವುದು ಅಥವಾ ಬದಲಾವಣೆ ಮಾಡತಕ್ಕದ್ದಲ್ಲ.

12.3 ತನ್ನ ಅನುಬಂಧಗಳನ್ನೂ ಒಳಗೊಂಡಂತೆ ಈ ಒಪ್ಪಂದವು, ಕಕ್ಷಿಗಳ ನಡುವಿನ ಇಡೀ ಒಪ್ಪಂದವನ್ನು ನಿರೂಪಿಸುತ್ತದೆ ಮತ್ತು ಇಲ್ಲಿರುವ ವಿಷಯವನ್ನು ಕುರಿತಂತೆ ಹಿಂದಿನ ಎಲ್ಲ, ಮೌಖಿಕ ಅಥವಾ ಲಿಖಿತ, ಒಪ್ಪಂದಗಳು, ಏರ್ಪಾಡುಗಳು ಮತ್ತು ಗೊತ್ತುಪಾಡುಗಳನ್ನು ರದ್ದು ಮಾಡುತ್ತದೆ.

12.4 ಯಾವುದೇ ಕಕ್ಷಿಯು ಇನ್ನೊಬ್ಬ ಕಕ್ಷಿಯ ಪೂರ್ವಲಿಖಿತ ಒಪ್ಪಿಗೆಯಿಲ್ಲದೆ ತನ್ನ ಎಲ್ಲ ಅಥವಾ ಯಾವುದೇ ಹೊಣೆಗಳು ಅಥವಾ ಹಕ್ಕುಗಳನ್ನು ನಿಯೋಜನೆ (assign) ಮಾಡುವುದಾಗಲೀ ಪ್ರತಿಬಂಧಿಸುವುದಾಗಲೀ (encumber) ಮಾಡತಕ್ಕದ್ದಲ್ಲ.

12.5 ಈ ಒಪ್ಪಂದವನ್ನು ಎರಡು ಪ್ರತಿರೂಪಗಳಲ್ಲಿ (counterparts) ಸಹಿಮಾಡತಕ್ಕದ್ದು; ಇವೆರಡೂ ಮೂಲವೆಂದೇ ಪರಿಗಣಿಸಲ್ಪಡುತ್ತವೆ, ಆದರೆ ಎಲ್ಲವೂ ಸೇರಿ ಒಂದು ಸಂಲೇಖವಾಗುತ್ತದೆ.

12.6 ಈ ಒಪ್ಪಂದದಲ್ಲಿ ಬಳಸಲಾದ ಶೀರ್ಷಿಕೆಗಳು ಅನುಕೂಲಕ್ಕಾಗಿ ಮಾತ್ರವೇ ಹೊರತು ಒಪ್ಪಂದದ ಅರ್ಥೈಕೆಗಾಗಲೀ ವ್ಯಾಖ್ಯಾನಕ್ಕಾಗಲೀ ಅಲ್ಲ.

12.7 ಈ ಒಪ್ಪಂದದ ಯಾವುದೇ ಷರತ್ತುಗಳು ಕಕ್ಷಿಗಳ ಅಥವಾ ಅವರ ವಾರಸುದಾರರು ಮತ್ತು ನಿಯೋಗಿಗಳ ಲಾಭಕ್ಕೆ ಅನ್ವಯ (apply to), ಬಂಧಕ (binding) ಅಥವಾ ಸಾಧಕ (inure) ವಾಗುವುದಿಲ್ಲ. ಯಾವೊಬ್ಬ ಕಕ್ಷಿಯೂ ಈ ಒಪ್ಪಂದವನ್ನು ಇನ್ನೊಬ್ಬ ಕಕ್ಷಿಯ ಪೂರ್ವಲಿಖಿತ ಒಪ್ಪಿಗೆಯಿಲ್ಲದೆ ಮೂರನೆಯ ವ್ಯಕ್ತಿಗೆ ನಿಯೋಜಿಸುವಂತಿಲ್ಲ. ಆದರೆ, ಒಬ್ಬ ಕಕ್ಷಿಯು (ಈ ಒಪ್ಪಂದದ ಹೊಣೆಗಳಿಂದ ಬಿಡುಗಡೆ ಹೊಂದದೆ) ಈ ಒಪ್ಪಂದವನ್ನು ತನ್ನ ಎಲ್ಲ ವ್ಯವಹಾರ ಅಥವಾ ಆಸ್ತಿಗಳಿಗೆ ವಾರಸುದಾರನಾಗುವ ಯಾವುದೇ ಮೂರನೇ ವ್ಯಕ್ತಿಗೆ ನಿಯೋಜಿಸಬಹುದು (assign).

12.8 ಈ ಒಪ್ಪಂದದ ಯಾವುದೇ ನಿಯಮವು (provision) ಅನೂರ್ಜಿತವಾದಲ್ಲಿ, ನ್ಯಾಯ ವಿರುದ್ಧ ವಾದಲ್ಲಿ, ಜಾರಿಗೊಳಿಸಲಸಾಧ್ಯವಾದಲ್ಲಿ ಅದನ್ನು ಆದಷ್ಟುಮಟ್ಟಿಗೆ ಸಿಂಧುವಾಗಿಸಲು (valid), ನ್ಯಾಯಬದ್ಧ (legal) ಮತ್ತು ಜಾರಿಯೋಗ್ಯವಾಗುವಂತೆ (enforceable) ಬದಲಾಯಿತಕ್ಕದ್ದು ಮತ್ತು ಸಾಧ್ಯವಾದಮಟ್ಟಿಗೆ ಕಕ್ಷಿಗಳ ಉದ್ದೇಶಕ್ಕೆ ಹತ್ತಿರವಾಗುವಂತೆ ಮಾಡುವುದು, ಮತ್ತು ಇದರಿಂದ ಉಳಿದ ನಿಯಮಗಳಿಗೆ ಯಾವುದೇ ರೀತಿಯಲ್ಲಿ ಭಂಗವಾಗದಂತೆ ನೋಡಿಕೊಳ್ಳುವುದು.

12.9 ಈ ಒಪ್ಪಂದದ ಯಾವುದೇ ನಿಯಮದ ತಿದ್ದುಪಡಿಯು ಲಿಖಿತವಾಗಿರದಿದ್ದು ಕಕ್ಷಿಗಳಿಂದ ಸಹಿಮಾಡಲ್ಪಡದಿದ್ದಲ್ಲಿ ಊರ್ಜಿತವಾಗುವುದಿಲ್ಲ. ಈ ಒಪ್ಪಂದದ ಯಾವುದೇ ನಿಯಮದ ವಿನಾಯಿತಿಯು ಲಿಖಿತವಾಗಿರದಿದ್ದು ಕಕ್ಷಿಗಳಿಂದ ಸಹಿಮಾಡಲ್ಪಡದಿದ್ದಲ್ಲಿ ಊರ್ಜಿತವಾಗುವುದಿಲ್ಲ. ಯಾವುದೇ ಕಕ್ಷಿಯು ಈ ಒಪ್ಪಂದದ ಯಾವುದಾದರೂ ಉಲ್ಲಂಘನೆಯ ವಿನಾಯಿತಿ ನೀಡಿದ್ದರೂ ಅಂಥ ವಿನಾಯಿತಿಯು ಇತರ ಉಲ್ಲಂಘನೆಗಳಿಗೆ ವಿಸ್ತರಿಸುವುದಿಲ್ಲ ಅಥವಾ ಇಂಥ ಇತರ ಉಲ್ಲಂಘನೆಯಾದರೆ ಕಕ್ಷಿಯ ಹಕ್ಕು ಯಾವುದೇ ರೀತಿಯಲ್ಲಿ ಬಾಧಿತವಾಗುವುದಿಲ್ಲ.

12.10 ಈ ಒಪ್ಪಂದದ ಕಕ್ಷಿಗಳಿಗೆ ನೀಡಬೇಕಾದ ತಿಳಿವಳಿಕೆಗಳು ಲಿಖಿತರೂಪದಲ್ಲಿರತಕ್ಕದ್ದು ಮತ್ತು ಅವನ್ನು ಸ್ವೀಕೃತಿ ಬರಬೇಕಾದ ನೋಂದಾಯಿತ ಅಂಚೆಯ ಮೂಲಕ ಅಥವಾ (ಇನ್ನೊಬ್ಬ ಕಕ್ಷಿಗೆ ಬೇರೆ ರೀತಿಯಲ್ಲಿ ತಿಳಿಸಿರದಿದ್ದಲ್ಲಿ) ವೈಯಕ್ತಿಕವಾಗಿ ಈ ಮುಂದಿನ ವಿಳಾಸಕ್ಕೆ ಬಟವಾಡೆ ಮಾಡಿದರೆ ಸಾಕು:

ಕಂಪನಿ;-

____________________

____________________

____________________

ರೈತ:-
ತಂದೆಯ ಹೆಸರು: ____________________
ವಿಳಾಸ: ____________________

____________________

____________________

12.11 ಈ ಒಪ್ಪಂದದಲ್ಲಿ ಏನೇ ಇದ್ದರೂ ಮತ್ತು ಇಲ್ಲಿ ಏನೇ ಹೇಳಲಾಗಿದ್ದರೂ, ಇದರ ನಿಯಮಗಳಲ್ಲಿ ಯಾವುದೇ ಅಥವಾ ಎಲ್ಲವೂ ರೈತರ (ಸಬಲೀಕರಣ ಮತ್ತು ಸಂರಕ್ಷಣೆ) ಒಪ್ಪಂದ ಅಧಿನಿಯಮ, 2020 ರ ನಿಯಮಗಳಿಗೆ ವಿರುದ್ಧವಾಗಿದ್ದರೆ ಈ ಒಪ್ಪಂದವು ಅನೂರ್ಜಿತವಾಗುವುದು ಮತ್ತು ಆ ಕಾರಣದಿಂದ ಉಂಟಾದ ಹಣಕಾಸಿನ ಖರ್ಚುಗಳನ್ನು ಕಂಪನಿಯು ಭರಿಸಬೇಕು.

ಇದಕ್ಕೆ ಸಾಕ್ಷಿಯಾಗಿ ಈ ಒಪ್ಪಂದಕ್ಕೆ ಮತ್ತು ಇದರ ಇನ್ನೊಂದು ಪ್ರತಿಗೆ ಈ ಮೊದಲು ಇಲ್ಲಿ ಮೇಲೆ ಬರೆದ ದಿನಾಂಕದಂದು ಒಪ್ಪಂದದ ಕಕ್ಷಿಗಳು ತಂತಮ್ಮ ಸ್ವಹಸ್ತಗಳಿಂದ ಸಹಿಮಾಡಿ/ಹೆಬ್ಬೆರಳು ಒತ್ತಿ ಒಪ್ಪಿಗೆ ಸೂಚಿಸಿರುತ್ತಾರೆ.

ಇಲ್ಲಿ ಹೆಸರಿಸಲಾದ 'ರೈತ'ರಿಂದ ; ____________________

______________________________ ಇವರ ಸಮ್ಮುಖದಲ್ಲಿ

ಸಹಿಮಾಡಿ ನೀಡಲಾಗಿದೆ

ಇಲ್ಲಿ ಹೆಸರಿಸಲಾದ 'ಕಂಪನಿ'ಯಿಂದ ; ______________________________

______________________________ ಇವರ ಸಮ್ಮುಖದಲ್ಲಿ

ಸಹಿಮಾಡಿ ನೀಡಲಾಗಿದೆ

______________________ ಪರವಾಗಿ

ಪ್ರಾಧಿಕೃತರ ರುಜು.

## ಅನುಬಂಧಗಳ ಪಟ್ಟಿ

ಅನುಬಂಧ ಎ: ಕುಯ್ಲಿನ ಸಮಯದಲ್ಲಿ ಗೊನೆ ಆಯ್ಕೆ ಮತ್ತು ದರ್ಜೆ ನಿಗದಿಗೆ ಮಾರ್ಗದರ್ಶನಗಳು

ಅನುಬಂಧ ಬಿ: ತೂಕಮಾಡುವಿಕೆ ಮತ್ತು ಪಾವತಿಗೆ ಮಾರ್ಗದರ್ಶನಗಳು

ಅನುಬಂಧ ಸಿ: ಬಾಳೆ ತೋಟದ ಮೌಲ್ಯಮಾಪನಕ್ಕೆ ಕಾರ್ಯಾಚರಣೆಯ ಮಾದರಿ

ಅನುಬಂಧ ಡಿ: ಬಾಳೆಹಣ್ಣಿನ ಗುಣಮಟ್ಟದ ಮಾನದಂಡಗಳು (parameters)

## ಅನುಬಂಧ ಎ: ಕುಯ್ಲಿನ ಸಮಯದಲ್ಲಿ ಗೊನೆ ಆಯ್ಕೆ ಮತ್ತು ದರ್ಜೆ ನಿಗದಿಗೆ ಮಾರ್ಗದರ್ಶನಗಳು

1. ಸ್ವೀಕರಿಸಲು **ಯೋಗ್ಯವಾದ** ಗೊನೆಗಳು
   - ಪರಸ್ಪರ ಮೌಲ್ಯಮಾಪನ ವ್ಯವಸ್ಥೆಯನ್ನು ಸ್ಪಷ್ಟಪಡಿಸತಕ್ಕದ್ದು
2. ಭಾಗಶಃ ಸ್ವೀಕರಿಸಿದ ಗೊನೆಗಳು
   - ಪರಸ್ಪರ ಮೌಲ್ಯಮಾಪನ ವ್ಯವಸ್ಥೆಯನ್ನು ಸ್ಪಷ್ಟಪಡಿಸತಕ್ಕದ್ದು
3. ತಿರಸ್ಕರಿಸಲಾದ ಗೊನೆಗಳು
   - ಪರಸ್ಪರ ಮೌಲ್ಯಮಾಪನ ವ್ಯವಸ್ಥೆಯನ್ನು ಸ್ಪಷ್ಟಪಡಿಸತಕ್ಕದ್ದು

## ಅನುಬಂಧ ಬಿ: ತೂಕಮಾಡುವಿಕೆ ಮತ್ತು ಪಾವತಿಗೆ ಮಾರ್ಗದರ್ಶನಗಳು

**ಎ. ತೂಕಮಾಡುವಿಕೆ**

i. ಸ್ವೀರಿಸಲು ಯೋಗ್ಯವಾದ ಗೊನೆಗಳನ್ನು ಕೊಯ್ಯಬೇಕು ಮತ್ತು ಕೆಳಗಿನ ಚಿಪ್ಪುಗಳನ್ನು ಕತ್ತರಿಸಬೇಉ. ಆಯ್ಕೆಯಾದ ಚಿಪ್ಪುಗಳನ್ನು ಮಾತ್ರ ಪೆಟ್ಟಿಗೆಗಳಲ್ಲಿ/ಕ್ರೇಟುಗಳಲ್ಲಿ ಇರಿಸಿ ತೂಕಮಾಡಬೇಕು.

ii. ರೈತರೊಂದಿಗೆ ಅಥವಾ ಅವನ/ಅವಳ ಪ್ರತಿನಿಧಿಗಳ ಜೊತೆ ಸೇರಿ ಕೊಯ್ಲು ಮೇಸ್ತ್ರಿಯು (harvesting supervisor) ನಿವ್ವಳ ಪೆಟ್ಟಿಗೆಗಳ ತೂಕವನ್ನು ದಾಖಲಿಸಿಕೊಳ್ಳಬೇಕು.

iii. ಪೆಟ್ಟಿಗೆಗಳು/ಕ್ರೇಟುಗಳನ್ನು ತುಂಬಿದ ವಾಹನವನ್ನು ರೈತನ ಸ್ವಂತ ಖರ್ಚಿನಲ್ಲಿ ತೂಕಮಾಡಿಸಬೇಕು ಮತ್ತು ಪ್ಯಾಕಿಂಗ್ ಸಾಮಗ್ರಿಯ, ಎಂದರೆ ಪೆಟ್ಟಿಗೆಗಳು/ಕ್ರೇಟುಗಳ, ತೂಕವನ್ನು ಕಳೆದು ಬಾಳೆಹಣ್ಣುಗಳ ನಿವ್ವಳ ತೂಕವನ್ನು ಲೆಕ್ಕಹಾಕಬೇಕು.

**ಬಿ. ಪಾವತಿಗೆ ಆಧಾರ**

| ಸರಕುಪಟ್ಟಿಯ ಬಾಬ್ತು | ಲೆಕ್ಕ ಹಾಕಲಾದ ಮೊತ್ತ |
|---|---|
| ಒಳ್ಳೆಯ ಗುಣಮಟ್ಟದ ಭಾಗವಾಗಿ ಸ್ವೀಕರಿಸಿದ ಬಾಳೆಹಣ್ಣು | ಆಧಾರ ಬೆಲೆ (ಬಿ 1): ನಿವ್ವಳ ತೂಕ ಕಿಲೋ (A+B+C) * ಪರಸ್ಪರ ಒಪ್ಪಿತವಾದ ಮಾರುಕಟ್ಟೆ ದರ (ಕಿಲೋ ಒಂದಕ್ಕೆ ರೂ.) |

## ಅನುಬಂಧ ಸಿ: ಬಾಳೆ ತೋಟದ ಮೌಲ್ಯಮಾಪನದ ಕಾರ್ಯ ಮಾದರಿ

ಎ. ಮಾಸಿಕ ಮೌಲ್ಯಮಾಪನ ಮತ್ತು ವರದಿಗಳು

- ಪರಸ್ಪರ ಮೌಲ್ಯಮಾಪನ ವ್ಯವಸ್ಥೆಯನ್ನು ಸ್ಪಷ್ಟಪಡಿಸತಕ್ಕದ್ದು

ಬಿ. ಗುಣಮಟ್ಟ ನಿರ್ಧಾರ ವ್ಯವಸ್ಥೆ

- ಪರಸ್ಪರ ಮೌಲ್ಯಮಾಪನ ವ್ಯವಸ್ಥೆಯನ್ನು ಸ್ಪಷ್ಟಪಡಿಸತಕ್ಕದ್ದು

## ಅನುಬಂಧ ಡಿ: ಬಾಳೆಯ ಗುಣಮಟ್ಟ ಮಾನದಂಡಗಳು ಮತ್ತು ನಿರ್ದಿಷ್ಟತೆಗಳು

i. ಎ- ದರ್ಜೆಗೆ ದೋಷ ಸಹಿಷ್ಣುತೆ

- ದೋಷಗಳ ವಿವರಗಳು ಮತ್ತು ಅವುಗಳ ಸಹಿಷ್ಣುತೆಯ ಮಿತಿಯನ್ನು ಪರಸ್ಪರ ಚರ್ಚಿಸಿ ಸ್ಪಷ್ಟಪಡಿಸತಕ್ಕದ್ದು

ii. ಬಿ- ದರ್ಜೆಗೆ ದೋಷ ಸಹಿಷ್ಣುತೆ

- ದೋಷಗಳ ವಿವರಗಳು ಮತ್ತು ಅವುಗಳ ಸಹಿಷ್ಣುತೆಯ ಮಿತಿಯನ್ನು ಪರಸ್ಪರ ಚರ್ಚಿಸಿ ಸ್ಪಷ್ಟಪಡಿಸತಕ್ಕದ್ದು

iii. ಶೂನ್ಯ ಸಹಿಷ್ಣುತೆ ದೋಷಗಳು (zero tolerance defects)

- ದೋಷಗಳ ವಿವರಗಳು ಮತ್ತು ಅವುಗಳ ಸಹಿಷ್ಣುತೆಯ ಮಿತಿಯನ್ನು ಪರಸ್ಪರ ಚರ್ಚಿಸಿ ಸ್ಪಷ್ಟಪಡಿಸತಕ್ಕದ್ದು

iv. ಹಣ್ಣಿನ ವಯಸ್ಸು (fruit age), ವ್ಯಾಸ (diameter), ಉದ್ದ, ಚಿಪ್ಪುಗಳಲ್ಲಿ ಹಣ್ಣುಗಳ ಸಂಖ್ಯೆ ಮತ್ತು ಕೊಯ್ಲಿನ ಹಂತದಲ್ಲಿ ಉಪಯುಕ್ತ ಎಲೆಗಳು.

| | |
|---|---|
| ಹಣ್ಣಿನ ವಯಸ್ಸು -ವಾರ | ಋತುಮಾನದ ಸ್ಥಿತಿ ಆಧರಿಸಿ ಮತ್ತು QA ಇಲಾಖೆಯಿಂದ ಕಟಾವು ಸೂಚನೆಯಂತೆ (8 ರಿಂದ 16 ವಾರಗಳವರೆಗೆ ವ್ಯತ್ಯಾಸವಾಗುವುದು) |
| ಕುಯ್ಲಿನ ಸಮಯದಲ್ಲಿ ಎಲೆಗಳು | ಕನಿಷ್ಠ 5 ಉಪಯುಕ್ತ ಎಲೆಗಳು |
| ಅಳತೆ (Calibration) | 44-46 ಕ್ಯಾಲಿಪರ್ (2ನೇ ಚಿಪ್ಪಿನ ಮಧ್ಯದ ಹಣ್ಣು) |
| ಹಣ್ಣಿನ ಉದ್ದ (ಅಂಗುಲಗಳಲ್ಲಿ) | ತಿರುಳಿನ ಉದ್ದ ಕನಿಷ್ಠ 7 ಅಂಗುಲ |
| ಹಣ್ಣುಗಳು / ಚಿಪ್ಪುಗಳ ಸಂಖ್ಯೆ | ಕನಿಷ್ಠ 12 |